

ಹುಡುಗಿ: ದೇವರೆ, ನಂಗೆ ಪ್ರೀತಿ ಮಾಡೋಕೆ ಒಳ್ಳೆ ಬುದ್ಧಿವಂತ ಹುಡುಗ ಸಿಗೋ ಹಾಗೆ ಮಾಡಪ್ಪಾ.
ದೇವರು: ಬುದ್ಧಿವಂತ ಹುಡುಗರು ಯಾರೂ ಲವ್ವಲ್ಲಿ, ಬೀಳಲ್ಲ ಭಕ್ತೆ!

★★★

ಸುರೇಶ: ಆಸ್ಪತ್ರೆಯ ಗ್ರಂಥಾಲಯದಲ್ಲಿ ಪುಸ್ತಕ ಓದುತ್ತಿದ್ದಕ್ಕೆ ನಿನ್ನ ವೈದ್ಯ ಸ್ನೇಹಿತನನ್ನು ಕೆಲಸದಿಂದ ತೆಗೆದರಂತೆ ನಿಜಾನ?
ರಮೇಶ: ಹೌದು ಕಣೋ.
ಸುರೇಶ: ಅಷ್ಟಕ್ಕೂ ಆ ವೈದ್ಯ ಓದುತ್ತಿದ್ದ ಪುಸ್ತಕವಾದರೂ ಯಾವ್ದೊ?
ರಮೇಶ: '30 ದಿನಗಳಲ್ಲಿ ವೈದ್ಯನಾಗುವುದು ಹೇಗೆ?' ಪುಸ್ತಕ!

★★★

ಹುಡುಗ: ನಿನ್ನ ಹೆಸರೇನು?
ಹುಡುಗಿ: ಎಲ್ಲರೂ ನನ್ನನ್ನು 'ಅಕ್ಕ' ಅಂತಾರೆ. ನಿನ್ನ ಹೆಸರೇನು?
ಹುಡುಗ: ವಾವ್, ವಾಟ್ ಎ ಕೋ–ಇನ್ಸಿಡೆಂಟ್ ನನ್ನನ್ನೂ ಎಲ್ಲರೂ 'ಭಾವ' ಅಂತಾರೆ!

★★★

ಅಪ್ಪ: ಲೇ ಕಳ್ ನನ್ ಮಗ್ನೆ, ನಿನ್ನ ಪರೀಕ್ಷೆ ಫಲಿತಾಂಶ ಏನಾಯ್ತೊ?
ಗುಂಡ: ಹೇ ಅಪ್ಪಾ, ನಾನು ಮತ್ತೆ ಫೇಲ್ ಆದೆ.
ಅಪ್ಪ: ಅಯ್ಯೋ ಪಾಪಿ. ಇನ್ನು ಮುಂದೆ ನನ್ನನ್ನು ಅಪ್ಪಾ ಅಂತ ಕರೀಬೇಡ.
ಗುಂಡ: ಓ.. ಕಮಾನ್ ಅಪ್ಪಾ.. ನಾನು ಹೇಳ್ತಾ ಇದ್ದಿದ್ದು, ಶಾಲೆಯಲ್ಲಿ ನಡೆದ ಕಿರುಪರೀಕ್ಷೆ ಫಲಿತಾಂಶದ ಬಗ್ಗೆ, ನನ್ನ ಡಿಎನ್ಎ ಪರೀಕ್ಷೆ ಬಗ್ಗೆ ಅಲ್ಲ!

★★★

ಮಗ: ಪಪ್ಪಾ ನಮ್ ಟೀಚರ್ ಸೂಪರ್ ಆಗಿದ್ದಾರೆ ಗೊತ್ತಾ?
ಅಪ್ಪ: ಹಾಗಿದ್ರೆ ಅವ್ರಿಗೆ ನನ್ನ ಮೊಬೈಲ್ ನಂಬರ್ ಕೊಡು!
ಮಗ: ಏನಪ್ಪಾ ನೀನು, ಯಾವಾಗ್ಲೂ ನಿಂಗೇ ಸೆಟ್ ಮಾಡ್ಕೋಳೋಕೆ ನೋಡ್ತೀಯಾ!

★★★

ಅವಳು: ನನ್ನ ಲವರ್ ಹತ್ತಿರ 5 ಎಟಿಎಂ ಕಾರ್ಡ್ ಇದೆ. ಅದಕ್ಕೆ ಅವನಂದ್ರೆ ನಂಗೆ ತುಂಬ ಇಷ್ಟ.
ಇವಳು: ಅಷ್ಟೇನಾ, ನನ್ನ ಲವರ್ ಮೂರು ಬ್ಯಾಂಕಿನ ಬೀಗದ ಕೈ ಇವೆ!
ಅವಳು: ಹೌದಾ, ಅವರೇನು ಬ್ಯಾಂಕ್ ಓನರಾ?
ಇವಳು: ಇಲ್ವೆ, ಬ್ಯಾಂಕಿನ 'ವಾಚ್‌ಮ್ಯಾನ್'.

(ಸಂಗ್ರಹ) ಎಂ. ವೀರಭದ್ರ,
ಒರೋಹಳ್ಳಿ


